## ಯೋಜನೆಯ ಹಿನ್ನೆಲೆ :

ಭಾರತದ ಉಜ್ವಲ ಭವಿಷ್ಯಕ್ಕೆ ಒಂದು ಉತ್ತಮ ಬಂಡವಾಳ ಹೂಡಿಕೆ ಯಾವುದಿರಬಹುದು? "ಮಕ್ಕಳ ಅಭಿವೃದ್ಧಿಯೇ ರಾಷ್ಟ್ರದ ಆದ್ಯತೆಯ ಪ್ರಮುಖ ಕಾರ್ಯಸೂಚಿಯಾಗಬೇಕು, ಮಕ್ಕಳು ಈ ಆದ್ಯತೆಗೆ ಅರ್ಹರಾಗಿರುವರು ಎಂಬ ಕಾರಣಕ್ಕಾಗಿ ಅಲ್ಲ, ಬದಲಾಗಿ ಮಕ್ಕಳು ನಮ್ಮ ರಾಷ್ಟ್ರದ ಪರಮೋಚ್ಛ ಮಾನವ ಸಂಪನ್ಮೂಲ ಎಂಬ ಕಾರಣಕ್ಕಾಗಿ" ಎಂದು 10ನೇ ಪಂಚ ವಾರ್ಷಿಕ ಯೋಜನೆಯ ಕೈಪಿಡಿಯಲ್ಲಿ ಉಲ್ಲೇಖಿಸಲಾಗಿದೆ. **ವಿದ್ಯಾರ್ಥಿಗಳು ತಮ್ಮ ಮುಂದಿನ ದಿನಗಳಲ್ಲಿ ವಿಜ್ಞಾನ ಕ್ಷೇತ್ರದ ಮಾಧ್ಯಮದಿಂದ ದೇಶಕ್ಕೆ ಕೊಡುಗೆಯನ್ನು ನೀಡುವ ದೃಷ್ಟಿಕೋನದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.**

"ವಿಜ್ಞಾನ ಶಿಕ್ಷಣ ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವನ್ನು ಸಮಾಜದ ಅಭಿವೃದ್ಧಿಗೆ ಬೆಸೆಯುವ" ಒಂದು ಅಭೂತಪೂರ್ವ ಪ್ರಯತ್ನವಾಗಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಈ ಯೋಜನೆಯನ್ನು ಹಮ್ಮಿಕೊಂಡಿದೆ.

## ಕರಾವಿಪ ಪರಿಚಯ

- ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವ ಉದ್ದೇಶದಿಂದ 1980ರಲ್ಲಿ ಸ್ಥಾಪಿತವಾದ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನ ರಾಜ್ಯಮಟ್ಟದ ಸ್ವಾಯತ್ತ ಸಂಸ್ಥೆಯಾಗಿದ್ದು, ಭಾರತರತ್ನ ಪ್ರೊ|| ಸಿ.ಎನ್.ಆರ್. ರಾವ್ ಅವರು ಪ್ರಸ್ತುತ ವಿಜ್ಞಾನ ಪರಿಷತ್ತಿನ ಮಹಾಪೋಷಕರಾಗಿರುತ್ತಾರೆ.

### ಧ್ಯೆಯೋದ್ದೇಶಗಳು

- ವಿಜ್ಞಾನ, ವೈಜ್ಞಾನಿಕ ಮನೋಧರ್ಮ, ಔಪಚಾರಿಕ ಹಾಗೂ ಅನೌಪಚಾರಿಕ ವಿಜ್ಞಾನ ಶಿಕ್ಷಣ – ಇವುಗಳನ್ನು ಜನರಲ್ಲಿ, ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸುವುದು.
- ಮುಖ್ಯವಾಗಿ ಕನ್ನಡದಲ್ಲಿ ವಿಜ್ಞಾನ ಉಪನ್ಯಾಸ, ವಿಚಾರಸಂಕಿರಣ, ಸಾರ್ವಜನಿಕ ವಿಚಾರಗೋಷ್ಠಿ, ಶೈಕ್ಷಣಿಕ ಪ್ರವಾಸ, ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ವಿಜ್ಞಾನ ಪುಸ್ತಕಗಳು ಹಾಗೂ ನಿಯತಕಾಲಿಕಗಳನ್ನು ಪ್ರಕಟಿಸಿ ವಿತರಣೆ ಮಾಡುವುದರ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವುದು.
- ವಿಜ್ಞಾನ ಸಂಘ, ಸಂಸ್ಥೆಗಳು ರೂಪುಗೊಂಡು ಅಭಿವೃದ್ಧಿಯಾಗಲು ಪ್ರೋತ್ಸಾಹ ನೀಡುವುದು ಹಾಗೂ ವಿಜ್ಞಾನ ಕೇಂದ್ರಗಳ ಸ್ಥಾಪನೆ ಹಾಗೂ ನಿರ್ವಹಣೆ.
- ವಿಜ್ಞಾನ ಬರಹಗಾರರು, ವಿಜ್ಞಾನಿಗಳು, ವಿಜ್ಞಾನ ಶಿಕ್ಷಕರು, ಕೈಗಾರಿಕೋದ್ಯಮಿಗಳು, ಪ್ರಕಾಶಕರು ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವುದರಲ್ಲಿ ಆಸಕ್ತರಾಗಿರುವವರ ನಡುವೆ ಪರಸ್ಪರ ಸಂಪರ್ಕ ಬೆಳೆಯಲು ಪ್ರೋತ್ಸಾಹ ನೀಡುವುದು.




## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

### ಪದಾಧಿಕಾರಿಗಳು

ಶ್ರೀ ಎಸ್.ವಿ. ಸಂಕನೂರ
ಅಧ್ಯಕ್ಷರು
ದೂ: 080–26718939

ಶ್ರೀ ಗಿರೀಶ ಬಿ. ಕಡ್ಲೇವಾಡ
ಗೌರವ ಕಾರ್ಯದರ್ಶಿ
ಮೊ : 9448830454

ಡಾ|| ಹುಲಿಕಲ್ ನಟರಾಜ್
ಉಪಾಧ್ಯಕ್ಷರು
ಮೊ : 9481776616

ಶ್ರೀ ಬಿ.ಎನ್. ಶ್ರೀನಾಥ್
ಸಹ ಕಾರ್ಯದರ್ಶಿ
ಮೊ : 9845458697

ಶ್ರೀ ಗುರುನಂಜಯ್ಯ ಎಸ್.ಎಂ.
ಉಪಾಧ್ಯಕ್ಷರು
ಮೊ : 9448938569

ಶ್ರೀ ನರೇಂದ್ರ ಆಡನೂರು
ಖಜಾಂಚಿ
ಮೊ : 9538086020

### ಸದಸ್ಯರುಗಳು

#### ಬೆಳಗಾವಿ ವಿಭಾಗ

| | |
|---|---|
| ಶ್ರೀ ಬಿ. ದೊಡ್ಡಬಸಪ್ಪ | ಮೊ : 9880656200 |
| ಶ್ರೀ ಹೆಚ್.ಜಿ. ಹುದ್ದಾರ್ | ಮೊ : 9448624070 |
| ಶ್ರೀ ಆರ್. ಎಸ್. ಪಾಟೀಲ | ಮೊ : 9448867705 |
| ಡಾ. ಆರ್.ಎಸ್. ಎಲಿ | ಮೊ. 9880378426 |
| ಶ್ರೀ ಶಂಕರ ತಮ್ಮಣ್ಣಾ ನಾಯಿಕ | ಮೊ : 9449039701 |

#### ಬೆಂಗಳೂರು ವಿಭಾಗ

| | |
|---|---|
| ಶ್ರೀ ಎಂ.ಟಿ. ಶಂಕರಪ್ಪ | ಮೊ : 9741570702 |
| ಶ್ರೀ ಈ. ಬಸವರಾಜು | ಮೊ : 9448957666 |
| ಶ್ರೀ ಕೌಶಿಕ್ ಪಿ.ಎಸ್. | ಮೊ : 9742711555 |
| ಶ್ರೀ ಉದಯರತ್ನ ಕುಮಾರ್ ಕೆ. | ಮೊ : 9980775862 |

#### ಕಲ್ಬುರ್ಗಿ ವಿಭಾಗ

| | |
|---|---|
| ಶ್ರೀ ದಾನಿ ಬಾಬುರಾವ್ | ಮೊ : 9448568360 |
| ಡಾ. ಕುಂಟೆಪ್ಪ ಗೌರೀಪುರ | ಮೊ : 9980759704 |
| ಶ್ರೀ ಕೊಟ್ರುಸ್ವಾಮಿ ಎಸ್.ಎಂ. | ಮೊ : 9449628680 |
| ಶ್ರೀ ಜಗನ್ನಾಥ್ ಕೆ. ಹಲಮಡಗಿ | ಮೊ : 9880366128 |
| ಶ್ರೀ ಸೂರ್ಯಪ್ರಕಾಶ ಘನಾತೆ | ಮೊ : 9980366128 |

#### ಮೈಸೂರು ವಿಭಾಗ

| | |
|---|---|
| ಶ್ರೀಮತಿ ಶ್ರೀಮತಿ ಹರಿಪ್ರಸಾದ್ | ಮೊ : 9945101649 |
| ಶ್ರೀ ಸಿ.ಕೃಷ್ಣೇಗೌಡ | ಮೊ : 9036989384 |
| ಶ್ರೀ ಎನ್.ಆರ್. ಮಂಜುನಾಥ್ | ಮೊ : 9620228023 |
| ಶ್ರೀ ರಾಮಚಂದ್ರ | ಮೊ : 9901852150 |


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು**

ವಿಜ್ಞಾನ ಭವನ, ನಂ. 24/2 ಮತ್ತು 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070
ದೂ. 080–26718939, 9483549159 ಇ–ಮೇಲ್ : krvp.info@gmail.com ವೆಬ್‌ಸೈಟ್ : www.krvp.org

ಯೋಜನಾ ಸಹಾಯಕರು : ಶ್ರೀ ರಾಜಶೇಖರ್ ಪಾಟೀಲ್, ಮೊ : 9008442557; ಶ್ರೀಮತಿ ದೇವಿಕಾ ಕೀರ್ತಿ, ಮೊ : 9449530245


# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಬೆಂಗಳೂರು

### ರಾಜ್ಯ ಮಟ್ಟದ ಯುವ ವಿಜ್ಞಾನಿಗಳ ಸಮಾವೇಶ 2017–18

# ಯುವ ವಿಜ್ಞಾನಿ ಪ್ರಶಸ್ತಿ



ಕರಾವಿಪ ಮಹಾಪೋಷಕರು
'ಭಾರತರತ್ನ' **ಪ್ರೊ|| ಸಿ.ಎನ್.ಆರ್. ರಾವ್** FRS
ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರು

**ಸಂಘಟನೆ**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ನೆರವು**

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

**ಸಹಯೋಗ**

ಪದವಿಪೂರ್ವ ಶಿಕ್ಷಣ ಇಲಾಖೆ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ
ಕರ್ನಾಟಕ ಸರ್ಕಾರ

**ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 14–6–2018**
**ಜಿಲ್ಲಾ ಮಟ್ಟದ ಸ್ಪರ್ಧೆಯ ದಿನಾಂಕ: 23–6–2018**
**ರಾಜ್ಯ ಮಟ್ಟದ ಸಮಾವೇಶ: 2018ರ ಜುಲೈ ತಿಂಗಳಿನಲ್ಲಿ**

**ಶ್ರೀ ಗಿರೀಶ ಕಡ್ಲೇವಾಡ**
ಗೌರವ ಕಾರ್ಯದರ್ಶಿ, ಕರಾವಿಪ

**ಶ್ರೀ ಎಸ್.ವಿ. ಸಂಕನೂರ**
ಅಧ್ಯಕ್ಷರು, ಕರಾವಿಪ

# ರಾಜ್ಯ ಮಟ್ಟದ ಯುವ ವಿಜ್ಞಾನಿಗಳ ಸಮಾವೇಶ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 2017–2018ನೇ ಸಾಲಿನ **ಯುವವಿಜ್ಞಾನಿಗಳ ಪ್ರಶಸ್ತಿಗಾಗಿ ಪ್ರಸ್ತುತ 9 ರಿಂದ 12ನೇ** ವರ್ಗದಲ್ಲಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಈ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಾಯೋಜಕತ್ವದಲ್ಲಿ ಸ್ಥಾಪಿಸಲಾಗಿದ್ದು, ವೈಜ್ಞಾನಿಕ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಗುರಿ ಹೊಂದಿದೆ. ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿದ ವಿದ್ಯಾರ್ಥಿಗಳನ್ನು ಆಯ್ದು **ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನಗಳನ್ನು** ನೀಡಿ ಗೌರವಿಸಲಾಗುತ್ತದೆ.

ಆಸಕ್ತ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿಗೊಳಿಸಿ ತಮ್ಮ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರ ಮೂಲಕ ಸಲ್ಲಿಸಬಹುದು. ಮೊದಲು ಜಿಲ್ಲಾ ಹಂತದಲ್ಲಿ ಮೂರು ಯುವ ವಿಜ್ಞಾನಿಗಳನ್ನು ಗುರುತಿಸಿದ ನಂತರ ರಾಜ್ಯ ಮಟ್ಟದಲ್ಲಿ ಎಲ್ಲಾ ಜಿಲ್ಲೆಗಳಿಂದ ಆಯ್ಕೆಯಾದ ಅತ್ಯುತ್ತಮ ಸುಮಾರು 100 ಯುವ ವಿಜ್ಞಾನಿಗಳು ಭಾಗವಹಿಸುವರು. **ರಾಜ್ಯ ಮಟ್ಟದ ಕಾರ್ಯಕ್ರಮವು ಸಮಾವೇಶದ ರೂಪದಲ್ಲಿ 3 ದಿನಗಳ ಕಾಲ ಜರುಗುವುದು.** ಸಮಾವೇಶದಲ್ಲಿ ವಿದ್ಯಾರ್ಥಿಗಳು ಖ್ಯಾತ ವಿಜ್ಞಾನಿಗಳೊಂದಿಗೆ ನೇರ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ವೈಜ್ಞಾನಿಕ ವಿಧಾನದ ಪರಿಚಯ ಪಡೆಯುತ್ತಾರೆ. ವಿದ್ಯಾರ್ಥಿಗಳನ್ನು ಭವಿಷ್ಯದಲ್ಲಿ ವಿಜ್ಞಾನಿಗಳನ್ನಾಗಿ ರೂಪಿಸುವ ಮತ್ತು ವಿಜ್ಞಾನ ವಿಷಯಗಳಲ್ಲಿ ಆಸಕ್ತಿ ಹಾಗೂ ಚಿಂತನ ಕೌಶಲ್ಯವನ್ನು ವೃದ್ಧಿಸುವ ಕಾರ್ಯಕ್ರಮ ಇದಾಗಿರುತ್ತದೆ.

ನಿಗದಿತ ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ / ಪದವಿಪೂರ್ವ ಶಿಕ್ಷಣ ಇಲಾಖೆ / ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ/ ಕರಾವಿಪ ಕಾರ್ಯಕಾರಿ ಸಮಿತಿ ಸದಸ್ಯರು/ ಜಿಲ್ಲಾ ಸಮಿತಿ / ಕರಾವಿಪ ವ್ಯಾಟ್ಸ್‌ಪ್ (9008442557 / 9483549159) / ಇಮೇಲ್ ಮೂಲಕ ಪಡೆಯಬಹುದು. ಕರಾವಿಪ ವೆಬ್‌ಸೈಟ್ www.krvp.org ನಿಂದಲೂ ಸಹ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಉದ್ದೇಶಗಳು :

- ವಿದ್ಯಾರ್ಥಿಗಳನ್ನು ಭವಿಷ್ಯದ ವಿಜ್ಞಾನಿಗಳನ್ನಾಗಿ ರೂಪಿಸುವುದು
- ಎಳೆಯ ವಯಸ್ಸಿನಲ್ಲೇ 'ವೈಜ್ಞಾನಿಕ ವಿಧಾನ'ದ ಪರಿಚಯ ಮಾಡುವುದು.
- ವಿದ್ಯಾರ್ಥಿಗಳು ರಾಜ್ಯದ / ರಾಷ್ಟ್ರದ ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು.
- ಮೂಲ ವಿಜ್ಞಾನದ ವಿಷಯಗಳಲ್ಲಿ ಮಕ್ಕಳ ಆಸಕ್ತಿ ಹಾಗೂ ಚಿಂತನ ಕೌಶಲ್ಯವನ್ನು ವೃದ್ಧಿಸುವುದು.

## ಆಯ್ಕೆ ಪ್ರಕ್ರಿಯೆ:

### ಅರ್ಜಿ ಸಲ್ಲಿಸುವ ವಿಧಾನ :

ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿಯನ್ನು ಭರ್ತಿಮಾಡಿ ಅದರೊಂದಿಗೆ ಆರನೇ ತರಗತಿಯಿಂದ ಭಾಗವಹಿಸಿದ (ಉದಾಹರಣೆಗೆ ಮಕ್ಕಳ ವಿಜ್ಞಾನ ಸಮಾವೇಶ, ಗಣಿತ, ವಿಜ್ಞಾನ ವಸ್ತುಪ್ರದರ್ಶನ, ವಿಜ್ಞಾನ ರಸಪ್ರಶ್ನೆ, ವಿಜ್ಞಾನ ನಾಟಕ, ವಿಜ್ಞಾನ ಗೋಷ್ಠಿ, ಬಾಲವಿಜ್ಞಾನಿ ಪ್ರಶಸ್ತಿ, ಮ್ಯಾಥಮೆಟಿಕ್ಸ್ ಒಲಂಪಿಯಾಡ್, ಇನ್ಸ್‌ಪೈರ್ ಅವಾರ್ಡ್, ಪ್ರತಿಭಾ ಕಾರಂಜಿ ಇತ್ಯಾದಿ) **ವಿಜ್ಞಾನ ಮತ್ತು ಗಣಿತ**ಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು/ಸ್ಪರ್ಧೆಯಲ್ಲಿ ದೊರೆತಿರುವ ಪ್ರಶಸ್ತಿ, ಬಹುಮಾನ, ಪ್ರಶಂಸಾ ಪತ್ರ, ಸನ್ಮಾನ ಪತ್ರ ಇತ್ಯಾದಿಗಳ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳೊಂದಿಗೆ 14–06–2018ರೊಳಗಾಗಿ ತಮ್ಮ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಚೇರಿಗೆ ಹಾಗೂ ಅರ್ಜಿಯ ಒಂದು ಪ್ರತಿಯನ್ನು ಅಂಚೆ / ಕೋರಿಯರ್ ಮೂಲಕ ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಯುವ ವಿಜ್ಞಾನಿ ವಿಭಾಗ, ವಿಜ್ಞಾನ ಭವನ, ನಂ. 24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070 ಇವರಿಗೆ ಸಲ್ಲಿಸುವುದು.

## ಜಿಲ್ಲಾ ಮಟ್ಟದ ಆಯ್ಕೆ ವಿಧಾನ :

**ಯೋಜನೆ/ಮಾದರಿಯ ಸಿದ್ಧತೆ ಮತ್ತು ಮಂಡನೆ** – ವಿದ್ಯಾರ್ಥಿಗಳು ಸ್ಪರ್ಧೆಯ ದಿನದಂದು (23–06–2018) ವಿಜ್ಞಾನ ಅಥವಾ ಗಣಿತ ವಿಷಯದಲ್ಲಿ ಸ್ವಂತ ಅಧ್ಯಯನ ಕೈಗೊಂಡು ಸಂಶೋಧಿಸಿದ, ವೈಜ್ಞಾನಿಕ ವಿಶ್ಲೇಷಣೆ ಅಥವಾ ಅವಲೋಕನದಿಂದ ಕೂಡಿದ ಯಾವುದಾದರೊಂದು ಯೋಜನೆ/ಮಾದರಿಯನ್ನು ನಿರ್ಣಾಯಕರ ಮುಂದೆ ಮಂಡಿಸಬೇಕು. (ಗರಿಷ್ಠ ಕಾಲಮಿತಿ : 8 ನಿಮಿಷ ಮಂಡನೆ ಹಾಗೂ 2 ನಿಮಿಷ ಪ್ರಶ್ನೋತ್ತರಗಳಿಗಾಗಿ ನಿಗದಿಪಡಿಸಿದೆ) ವಿದ್ಯಾರ್ಥಿಯು ವಿಷಯ ಮಂಡನೆಗಾಗಿ ಆಂಗ್ಲ ಅಥವಾ ಕನ್ನಡ ಭಾಷೆಯನ್ನು ಬಳಸಬಹುದು.

ಸ್ಪರ್ಧಿಗಳು ತಾವು ಆಯ್ಕೆಮಾಡಿಕೊಂಡಿರುವ ಯೋಜನೆ/ಮಾದರಿಯ ಬಗೆಗೆ ಎಲ್ಲಾ ಬಗೆಯ ವೈಜ್ಞಾನಿಕ ಮಾಹಿತಿಯನ್ನು ಕಲೆಹಾಕಿ ಸಮಗ್ರವಾಗಿ ಅಧ್ಯಯನ ಕೈಗೊಂಡು ಸರಾಗವಾಗಿ ವಿವರಿಸುವ ಪರಿಣಿತಿಯನ್ನು ಹೊಂದಿರಬೇಕು. ವಿದ್ಯಾರ್ಥಿಗಳು ಆಯ್ಕೆಮಾಡಿಕೊಳ್ಳುವ ವಿಷಯವು ವಿದ್ಯಾರ್ಥಿಗಳ ಗ್ರಹಿಕೆಯ ಮಟ್ಟಕ್ಕೆ ನಿಲುಕುವಂತಿರಬೇಕು ಹಾಗೂ ವಾಸ್ತವಕ್ಕೆ ಅನ್ವಯಿಸುವಂತಹದ್ದಾಗಿರಬೇಕು.

### ಲಿಖಿತ ಪರೀಕ್ಷೆ :

ಜಿಲ್ಲಾ ಮಟ್ಟದ ಸ್ಪರ್ಧೆಯ ದಿನದಂದು (ಜೂನ್ 23, 2018) ಜರಗುವ ಲಿಖಿತ ಪರೀಕ್ಷೆಯು ವಸ್ತುನಿಷ್ಠ ಪ್ರಶ್ನೆಪತ್ರಿಕೆಗಳನ್ನೊಳಗೊಂಡಿದ್ದು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತದೆ. ಅದರ ವಿವರ ಹೀಗಿದೆ: ವಿಜ್ಞಾನಿಗಳ ಸಾಧನೆ – 8 ಪ್ರಶ್ನೆಗಳು, ಭೌತವಿಜ್ಞಾನ – 8 ಪ್ರಶ್ನೆಗಳು, ಗಣಿತ ವಿಜ್ಞಾನ – 8 ಪ್ರಶ್ನೆಗಳು, ಜೀವ ವಿಜ್ಞಾನ – 8 ಪ್ರಶ್ನೆಗಳು, ರಸಾಯನ ವಿಜ್ಞಾನ – 8 ಪ್ರಶ್ನೆಗಳು. ಒಟ್ಟು 40 ಪ್ರಶ್ನೆಗಳನ್ನು ಉತ್ತರಿಸಲು ನೀಡುವ ಕಾಲಾವಕಾಶ 40 ನಿಮಿಷಗಳು

## ಪ್ರಶಸ್ತಿಗಳ ವಿವರ :

ಆಯ್ಕೆಗೊಳ್ಳುವ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರದೊಂದಿಗೆ ಈ ಕೆಳಕಂಡಂತೆ ನಗದು ಬಹುಮಾನಗಳನ್ನು ನೀಡಲಾಗುವುದು.

| | | | |
|---|---|---|---|
| **ಜಿಲ್ಲಾ ಮಟ್ಟ :** | **ಪ್ರಥಮ ಬಹುಮಾನ** | **ರೂ.** | **5000/–** |
| | **ದ್ವಿತೀಯ ಬಹುಮಾನ** | **ರೂ.** | **3000/–** |
| | **ತೃತೀಯ ಬಹುಮಾನ** | **ರೂ.** | **2000/** |
| **ರಾಜ್ಯಮಟ್ಟ :** | **4 ಯುವ ವಿಜ್ಞಾನಿಗಳಿಗೆ ತಲಾ ರೂ. 10,000/–** | | |

ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ 3 ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸಮಾವೇಶದಲ್ಲಿ ಭಾಗವಹಿಸಲು ಅವಕಾಶ ಪಡೆಯುತ್ತಾರೆ.

ರಾಜ್ಯ ಮಟ್ಟದ ಸಮಾವೇಶದಲ್ಲಿ 4 ವಿದ್ಯಾರ್ಥಿಗಳನ್ನು ರಾಜ್ಯ ಯುವ ವಿಜ್ಞಾನಿಗಳಾಗಿ ಆಯ್ಕೆಮಾಡಿ **ತಲಾ ರೂ. 10,000–00** ಗಳ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ವಿತರಿಸಲಾಗುವುದು.

ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಮತ್ತು ಮಾರ್ಗದರ್ಶಿ ಶಿಕ್ಷಕರಿಗೆ ಅಭಿನಂದನಾ ಪತ್ರವನ್ನು ನೀಡಲಾಗುವುದು.

## ಮೌಲ್ಯಮಾಪನದ ವಿವರ

| | |
|---|---|
| ಅರ್ಜಿ ಜೊತೆಗೆ ಸಲ್ಲಿಸಿದ ದಾಖಲೆಗಳಿಗಾಗಿ | ಗರಿಷ್ಠ 20 ಅಂಕಗಳು |
| ಲಿಖಿತ ಪರೀಕ್ಷೆ | ಗರಿಷ್ಠ 40 ಅಂಕಗಳು |
| ಯೋಜನೆಯ ಸಿದ್ಧತೆ ಮತ್ತು ಮಂಡನೆ | ಗರಿಷ್ಠ 40 ಅಂಕಗಳು |
| **ಒಟ್ಟು** | **100 ಅಂಕಗಳು** |

## ಮಾರ್ಗಸೂಚಿ

- ಅಭ್ಯರ್ಥಿಯು ಭರ್ತಿಮಾಡಿದ ಅರ್ಜಿಯನ್ನು ದೃಢೀಕರಿಸಿದ ಲಗತ್ತುಗಳೊಂದಿಗೆ ತಮ್ಮ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗೆ ಮತ್ತು ಅರ್ಜಿಯ ಒಂದು ಪ್ರತಿಯನ್ನು ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಯುವ ವಿಜ್ಞಾನಿ ವಿಭಾಗ, ಇವರಿಗೆ ಜೂನ್ 14, 2018ರೊಳಗಾಗಿ ಸಲ್ಲಿಸಬೇಕು.
- ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ದಿನಾಂಕ 23, ಜೂನ್ 2018 ರಂದು ರಾಜ್ಯದ ಎಲ್ಲ 34 ಜಿಲ್ಲೆಗಳಲ್ಲಿ ಬೆಳಿಗ್ಗೆ 10–00 ಗಂಟೆಗೆ ಏಕಕಾಲದಲ್ಲಿ ಆಯೋಜಿಸಲಾಗುವುದು
- ಸ್ಪರ್ಧೆಯ ದಿನದಂದು ಅರ್ಜಿ ನಮೂನೆಯೊಂದಿಗೆ ಲಗತ್ತಿಸಿರುವ ಪ್ರಶಸ್ತಿ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ನಿರ್ಣಾಯಕರಿಗೆ ಸಲ್ಲಿಸಬೇಕು.
- ಯೋಜನೆ/ಮಾದರಿಯ ವರದಿಯನ್ನು ಎ4 ಸೈಜಿನ ಹಾಳೆಯ ಒಂದು ಬದಿಯಲ್ಲಿ ಮಾತ್ರ ಬರೆಯಬೇಕು, ವರದಿಯ ಒಂದು ಜೆರಾಕ್ಸ್ ಪ್ರತಿಯನ್ನು ಜಿಲ್ಲಾ ಮಟ್ಟದ ಸ್ಪರ್ಧೆಯ ದಿನದಂದು (23–06–2018) ಸಲ್ಲಿಸುವುದು.
- ವಿದ್ಯಾರ್ಥಿಗಳು ನೀಡುವ ಯೋಜನೆ/ಮಾದರಿಯ ವರದಿಯು ಭಾವಚಿತ್ರ, ಸ್ವವಿವರ, ಶೀರ್ಷಿಕೆ, ಸಾರಾಂಶ, ಮಾಹಿತಿ ವಿಶ್ಲೇಷಣೆ, ಕೈಗೊಂಡ ಚಟುವಟಿಕೆಗಳು, ತೀರ್ಮಾನಗಳು, ಪರಿಹಾರ ಹಾಗೂ ತಮ್ಮ ಯೋಜನೆಯಿಂದ ಸಮಾಜಕ್ಕಾಗುವ ಉಪಯೋಗಗಳನ್ನು ಒಳಗೊಂಡಿರಬೇಕು.
- ವಿದ್ಯಾರ್ಥಿಯು ತನ್ನ ಯೋಜನೆಯನ್ನು ಮಂಡಿಸುವ ಸಮಯದಲ್ಲಿ ಗರಿಷ್ಠ 4 ಚಾರ್ಟ್/ಗ್ರಾಫ್‌ಗಳನ್ನು ಮತ್ತು ಯಂತ್ರೋಪಕರಣಗಳನ್ನು ಬಳಸಬಹುದು.
- ಕರ್ನಾಟಕ ರಾಜ್ಯದ ಯಾವುದೇ ಪಠ್ಯಕ್ರಮದ ಶಾಲಾ/ಕಾಲೇಜಿನಲ್ಲಿ ಪ್ರಸ್ತುತ (9 ರಿಂದ 12ನೇ ವರ್ಗದಲ್ಲಿ) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯು ಸ್ಪರ್ಧೆಯಲ್ಲಿ ಭಾಗವಹಿಸಬಹುದು.
- ಈಗಾಗಲೇ ರಾಜ್ಯಮಟ್ಟದಲ್ಲಿ ಯುವವಿಜ್ಞಾನಿಯಾಗಿ ಪ್ರಶಸ್ತಿ ಪಡೆದ ಅಭ್ಯರ್ಥಿಗಳಿಗೆ ಮತ್ತೆ ಇನ್ನೊಂದು ಬಾರಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.
- ಒಂದು ಶಾಲೆ / ಕಾಲೇಜಿನಿಂದ 3 ವಿದ್ಯಾರ್ಥಿಗಳಿಗೆ ಮಾತ್ರ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. 3 ವಿದ್ಯಾರ್ಥಿಗಳಿಗಿಂತ ಹೆಚ್ಚಿದ್ದಲ್ಲಿ, ಆಯಾ ಶಾಲಾ ಅಥವಾ ಕಾಲೇಜಿನಲ್ಲಿ ಸ್ಪರ್ಧೆ ನಡೆಸಿ 3 ವಿದ್ಯಾರ್ಥಿಗಳನ್ನು ಮಾತ್ರ ಜಿಲ್ಲಾ ಮಟ್ಟದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು.

**ಯುವ ವಿಜ್ಞಾನಿ ಪ್ರಶಸ್ತಿ ಪ್ರದಾನ ಯೋಜನೆಯ ರಾಜ್ಯ ಸಂಚಾಲಕರು**

**ಶ್ರೀ ಶಂಕರ ತಮ್ಮಣ್ಣಾ ನಾಯಿಕ**
ಮೊ : 9449039701

**ಶ್ರೀ ಹೆಚ್.ಜಿ. ಹುದ್ದಾರ್**
ಮೊ : 9448624070

**ಶ್ರೀ ಬಿ. ದೊಡ್ಡಬಸಪ್ಪ**
ಮೊ : 9880656200

**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು**
ವಿಜ್ಞಾನಭವನ, ನಂ.24/2 ಮತ್ತು 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 70
ದೂರವಾಣಿ: 080–26718939/ ಮೊ. 9483549159

# ಯುವ ವಿಜ್ಞಾನಿ ಪ್ರಶಸ್ತಿ

**ರಾಜ್ಯ ಮಟ್ಟದ ಯುವ ವಿಜ್ಞಾನಿಗಳ ಸಮಾವೇಶ : 2017–2018 : ಆಯ್ಕೆಗಾಗಿ ಅರ್ಜಿ ನಮೂನೆ**
**ನೆರವು: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,**
**ಸಹಯೋಗ: ಪದವಿಪೂರ್ವ ಕಾಲೇಜು ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು**
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕೆಸ್ಟೆಪ್ಸ್, ಕರ್ನಾಟಕ ಸರ್ಕಾರ**

| ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ |
|---|

(ಅರ್ಜಿಯನ್ನು ಸಂಬಂಧಿತ ಜಿಲ್ಲೆಯ ಉಪನಿರ್ದೇಶಕರು,, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಅರ್ಜಿಯ ಒಂದು ಪ್ರತಿಯನ್ನು ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಯುವ ವಿಜ್ಞಾನಿ ವಿಭಾಗ, ವಿಜ್ಞಾನಭವನ, ನಂ.24/2 ಮತ್ತು 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 70 ಇವರಲ್ಲಿ ಕಡ್ಡಾಯವಾಗಿ ದಿನಾಂಕ 14–6–2018 ರೊಳಗೆ ಸಲ್ಲಿಕೆಯಾಗಬೇಕು)

1. ವಿದ್ಯಾರ್ಥಿಯ ಹೆಸರು: ______________________
2. ಹುಟ್ಟಿದ ದಿನಾಂಕ : ______________________
3. ಶಾಲೆಯ / ಕಾಲೇಜಿನ ಹೆಸರು ಮತ್ತು ಪೂರ್ಣ ವಿಳಾಸ : ______________________

______________________________________________

ದೂರವಾಣಿ ;______________________ ವಿದ್ಯಾರ್ಥಿಯ ಮೊಬೈಲ್ : ______________________
ಇಮೇಲ್ : ______________________

4. ಮಾರ್ಗದರ್ಶಿ ಶಿಕ್ಷಕರ/ಉಪನ್ಯಾಸಕರ ಹೆಸರು: ______________________
ಮೊಬೈಲ್ ______________________

**ನಿಯಮ ಮತ್ತು ನಿಬಂಧನೆಗಳು :**

1. ಅರ್ಜಿ ನಮೂನೆಯಲ್ಲಿ ಸಲ್ಲಿಸುವ ಮಾಹಿತಿಗಳು ಸರಿಯಾದ ಮತ್ತು ನಿಖರವಾದುವುಗಳಾಗಿರಬೇಕು. ಮಾಹಿತಿಗಳು ಸರಿಯಾಗಿರದಿದ್ದಲ್ಲಿ ಅರ್ಜಿಯನ್ನು ಅನೂರ್ಜಿತಗೊಳಿಸುವ / ಪ್ರಶಸ್ತಿಯನ್ನು ಹಿಂಪಡೆವ ಹಕ್ಕನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹೊಂದಿರುತ್ತದೆ.
2. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಅಥವಾ ಪ್ರಶಸ್ತಿ ಪ್ರದಾನಕ್ಕಾಗಿ ಅಭ್ಯರ್ಥಿಗಳನ್ನು ಗುರುತಿಸುವ ಸೂಕ್ತ ಪ್ರಾಧಿಕಾರವು ಅರ್ಜಿಯಲ್ಲಿನ ಮಾಹಿತಿಗಳು ಅಪೂರ್ಣವಾಗಿದ್ದಲ್ಲಿ ಅಥವಾ ಸಂಬಂಧಿತ ದಾಖಲೆಗಳೊಂದಿಗೆ ಸಲ್ಲಿಕೆಯಾಗಿರದಿದ್ದಲ್ಲಿ ಅಥವಾ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಕೆಯಾಗಿರದಿದ್ದಲ್ಲಿ ಅಥವಾ ಪ್ರಶಸ್ತಿಗಾಗಿ ಇರುವ ಅರ್ಹತೆಗಳಿಗೆ ವಿಧಿಸಲಾದ ನಿಯಮ ಮತ್ತು ನಿಬಂಧನೆಗಳಲ್ಲಿ ಉಲ್ಲಂಘನೆ ಕಂಡುಬಂದಲ್ಲಿ ಅರ್ಜಿಯನ್ನು ಅನೂರ್ಜಿತಗೊಳಿಸಬಹುದು.
3. ಈ ಪ್ರಕ್ರಿಯೆಯಲ್ಲಿ ಆಯ್ಕೆ ಸಮಿತಿಯ ನಿರ್ಧಾರ ಅಂತಿಮವಾದದ್ದು ಹಾಗೂ ಈ ನಿರ್ಧಾರಗಳಿಗೆ ಅಭ್ಯರ್ಥಿಗಳೆಲ್ಲರೂ ಬದ್ಧರಾಗಿರುವರು ಮತ್ತು ನಿರ್ಧಾರದ ಮರು ಪರಿಶೀಲನೆಗೆ ಅವಕಾಶವಿರುವುದಿಲ್ಲ.
4. ಭರ್ತಿ ಮಾಡಿದ ಅರ್ಜಿಯು ಶಾಲೆಯ ಮುಖ್ಯೋಪಾಧ್ಯಾಯರು / ಕಾಲೇಜಿನ ಪ್ರಾಂಶುಪಾಲರ ಮೊಹರು ಮತ್ತು ಸಹಿಯೊಂದಿಗೆ ದೃಢೀಕೃತವಾಗಬೇಕು.
5. ಒಂದು ಶಾಲೆ /ಕಾಲೇಜಿನಿಂದ 3 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ. 3 ವಿದ್ಯಾರ್ಥಿಗಳಿಗಿಂತ ಹೆಚ್ಚಿದ್ದಲ್ಲಿ, ಆಯಾ ಶಾಲಾ ಅಥವಾ ಕಾಲೇಜಿನಲ್ಲಿ ಸ್ಪರ್ಧೆ ನಡೆಸಿ 3 ವಿದ್ಯಾರ್ಥಿಗಳನ್ನು ಮಾತ್ರ ಜಿಲ್ಲಾ ಮಟ್ಟದಲ್ಲಿ ಭಾಗವಹಿಸುವಂತೆ ಆಯಾ ಶಾಲೆಯ/ಕಾಲೇಜಿನ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು ಕಳುಹಿಸುವುದು.

**ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗಳು ಸತ್ಯವೆಂದೂ, ಅವುಗಳನ್ನು ನಾನೇ ಭರ್ತಿ ಮಾಡಿರುವೆನೆಂದೂ ದೃಢೀಕರಿಸುತ್ತೇನೆ ಮತ್ತು ಆಯ್ಕೆಗಿರುವ ಎಲ್ಲ ನಿಯಮ ಮತ್ತು ನಿಬಂಧನೆಗಳನ್ನು ಪೂರ್ಣವಾಗಿ ಮನಗಂಡಿರುತ್ತೇನೆ ಹಾಗೂ ಅವೆಲ್ಲವುಗಳಿಗೂ ನಾನು ಅರ್ಹತೆ ಪಡೆದಿರುತ್ತೇನೆ.**

ವಿದ್ಯಾರ್ಥಿಯ ಸಹಿ

ದಿನಾಂಕ :
ಸ್ಥಳ :

## ಶಾಲೆ / ಕಾಲೇಜಿನ ಮುಖ್ಯಸ್ಥರಿಗಾಗಿ

ಯುವ ವಿಜ್ಞಾನಿ ಪ್ರಶಸ್ತಿ – 2017–18 ಗಾಗಿ ನಮ್ಮ ಶಾಲೆಯ / ಕಾಲೇಜಿನ ವಿದ್ಯಾರ್ಥಿ/ವಿದ್ಯಾರ್ಥಿನಿ ---------------------- ರವರ ಹೆಸರನ್ನು ಸೂಚಿಸುತ್ತೇನೆ ಮತ್ತು ಈ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಯು ನೀಡಿರುವ ಮಾಹಿತಿಗಳು ಸತ್ಯವೆಂದು ದೃಢೀಕರಿಸುತ್ತೇನೆ.

| ______________________ | __________ | ______________________ |
|---|---|---|
| ಮುಖ್ಯೋಪಾಧ್ಯಾಯರ / ಪ್ರಾಂಶುಪಾಲರ ಹೆಸರು ಸಹಿ | ದಿನಾಂಕ | ಶಾಲೆಯ / ಕಾಲೇಜಿನ ಮೊಹರು |

.............................................................................................................

## ಕಚೇರಿ ಬಳಕೆಗೆ ಮಾತ್ರ

ಅರ್ಜಿ ಸಂಖ್ಯೆ :

ಸ್ವೀಕರಿಸಿದ ದಿನಾಂಕ :

ವಿಷಯ ನಿರ್ವಾಹಕರ ಸಹಿ : ಗೌರವ ಕಾರ್ಯದರ್ಶಿ / ಯೋಜನಾ ಅಧಿಕಾರಿ.

# ರಾಜ್ಯ ಮಟ್ಟದ ಯುವ ವಿಜ್ಞಾನಿಗಳ ಸಮಾವೇಶ:

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 2017–2018ನೇ ಸಾಲಿನ ಯುವವಿಜ್ಞಾನಿಗಳ ಪ್ರಶಸ್ತಿಗಾಗಿ 9 ರಿಂದ 12ನೇ ವರ್ಗದಲ್ಲಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಈ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಾಯೋಜಕತ್ವದಲ್ಲಿ ಸ್ಥಾಪಿಸಲಾಗಿದ್ದು, ವೈಜ್ಞಾನಿಕ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಗುರಿ ಹೊಂದಿದೆ. ವಿವಿಧ ವೈಜ್ಞಾನಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿದ ವಿದ್ಯಾರ್ಥಿಗಳನ್ನು ಆಯ್ದು ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನಗಳನ್ನು ನೀಡಿ ಗೌರವಿಸಲಾಗುತ್ತದೆ.

ಆಸಕ್ತ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿಗೊಳಿಸಿ ತಮ್ಮ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರ ಮೂಲಕ ಅರ್ಜಿ ಸಲ್ಲಿಸಬಹುದು. ಮೊದಲು ಜಿಲ್ಲಾ ಹಂತದಲ್ಲಿ ಮೂರು ಯುವ ವಿಜ್ಞಾನಿಗಳನ್ನು ಗುರುತಿಸಿದ ನಂತರ ರಾಜ್ಯ ಮಟ್ಟದಲ್ಲಿ ಎಲ್ಲಾ ಜಿಲ್ಲೆಗಳಿಂದ ಆಯ್ಕೆಯಾದ ಅತ್ಯುತ್ತಮ ಸುಮಾರು 100 ಯುವ ವಿಜ್ಞಾನಿಗಳು ಭಾಗವಹಿಸುವರು. **ರಾಜ್ಯ ಮಟ್ಟದ ಕಾರ್ಯಕ್ರಮವು ಸಮಾವೇಶದ ರೂಪದಲ್ಲಿ 3 ದಿನಗಳ ಅವಧಿಯಲ್ಲಿ ಜರುಗುವುದು.** ಪ್ರಸ್ತುತ ಸಮಾವೇಶದಲ್ಲಿ ವಿದ್ಯಾರ್ಥಿಗಳು ಖ್ಯಾತ ವಿಜ್ಞಾನಿಗಳೊಂದಿಗೆ ನೇರ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ವೈಜ್ಞಾನಿಕ ವಿಧಾನದ ಪರಿಚಯ ಪಡೆಯುತ್ತಾರೆ. ವಿದ್ಯಾರ್ಥಿಗಳನ್ನು ಭವಿಷ್ಯದಲ್ಲಿ ವಿಜ್ಞಾನಿಗಳನ್ನಾಗಿ ರೂಪಿಸುವ ಮತ್ತು ವಿಜ್ಞಾನ ವಿಷಯಗಳಲ್ಲಿ ಆಸಕ್ತಿ ಹಾಗೂ ಚಿಂತನ ಕೌಶಲ್ಯವನ್ನು ವೃದ್ಧಿಸುವ ಕಾರ್ಯಕ್ರಮ ಇದಾಗಿರುತ್ತದೆ.

**ಅರ್ಜಿ ಸಲ್ಲಿಸುವ ವಿಧಾನ :**

ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿಯನ್ನು ಭರ್ತಿಮಾಡಿ ಅದರೊಂದಿಗೆ ಆರನೇ ತರಗತಿಯಿಂದ ಭಾಗವಹಿಸಿದ (ಉದಾಹರಣೆಗೆ ಮಕ್ಕಳ ವಿಜ್ಞಾನ ಸಮಾವೇಶ, ಗಣಿತ, ವಿಜ್ಞಾನ ವಸ್ತುಪ್ರದರ್ಶನ, ವಿಜ್ಞಾನ ರಸಪ್ರಶ್ನೆ, ವಿಜ್ಞಾನ ನಾಟಕ, ವಿಜ್ಞಾನ ಗೋಷ್ಠಿ, ಬಾಲವಿಜ್ಞಾನಿ ಪ್ರಶಸ್ತಿ, ಮ್ಯಾಥಮೆಟಿಕ್ಸ್ ಒಲಂಪಿಯಾಡ್, ಇನ್ಸ್‌ಪೈರ್ ಅವಾರ್ಡ್, ಪ್ರತಿಭಾ ಕಾರಂಜಿ ಇತ್ಯಾದಿ) ವಿಜ್ಞಾನ ಮತ್ತು ಗಣಿತಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು/ಸ್ಪರ್ಧೆಯಲ್ಲಿ ದೊರೆತಿರುವ ಪ್ರಶಸ್ತಿ, ಬಹುಮಾನ, ಪ್ರಶಂಸಾ ಪತ್ರ, ಸನ್ಮಾನ ಪತ್ರ ಇತ್ಯಾದಿಗಳ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳೊಂದಿಗೆ 14–6–2018 ರೊಳಗಾಗಿ ತಮ್ಮ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಚೇರಿ ಹಾಗೂ ಅರ್ಜಿಯ ಒಂದು ಪ್ರತಿಯನ್ನು ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇವರಿಗೆ ಸಲ್ಲಿಸುವುದು.

**ಜಿಲ್ಲಾ ಮಟ್ಟದ ಆಯ್ಕೆ ವಿಧಾನ :**

**ಯೋಜನೆ/ಮಾದರಿಯ ಸಿದ್ಧತೆ ಮತ್ತು ಮಂಡನೆ –**

ವಿದ್ಯಾರ್ಥಿಗಳು ಸ್ಪರ್ಧೆಯ ದಿನದಂದು (23–6–2018) ವಿಜ್ಞಾನ ಅಥವಾ ಗಣಿತ ವಿಷಯದಲ್ಲಿ ಸ್ವಂತ ಅಧ್ಯಯನ ಕೈಗೊಂಡು ಸಂಶೋಧಿಸಿದ, ವೈಜ್ಞಾನಿಕ ವಿಶ್ಲೇಷಣೆ ಅಥವಾ ಅವಲೋಕನದಿಂದ ಕೂಡಿದ ಯಾವುದಾದರೊಂದು ಯೋಜನೆ/ಮಾದರಿಯನ್ನು ಸ್ಪರ್ಧೆಯ ದಿನದಂದು ನಿರ್ಣಾಯಕರ ಮುಂದೆ ಮಂಡಿಸಬೇಕು. (ಗರಿಷ್ಠ ಕಾಲಮಿತಿ : 8 ನಿಮಿಷ ಮಂಡನೆ ಹಾಗೂ 2 ನಿಮಿಷ ಪ್ರಶ್ನೋತ್ತರಗಳಿಗಾಗಿ ನಿಗದಿಪಡಿಸಿದೆ) ವಿದ್ಯಾರ್ಥಿಯು ವಿಷಯ ಮಂಡನೆಗಾಗಿ ಆಂಗ್ಲ ಅಥವಾ ಕನ್ನಡ ಭಾಷೆಯನ್ನು ಬಳಸಬಹುದು.

ಸ್ಪರ್ಧಿಗಳು ತಾವು ಆಯ್ಕೆಮಾಡಿಕೊಂಡಿರುವ ಯೋಜನೆ/ಮಾದರಿಯ ಬಗೆಗೆ ಎಲ್ಲಾ ಬಗೆಯ ವೈಜ್ಞಾನಿಕ ಮಾಹಿತಿಯನ್ನು ಕಲೆಹಾಕಿ ಸಮಗ್ರವಾಗಿ ಅಧ್ಯಯನ ಕೈಗೊಂಡು ಸರಾಗವಾಗಿ ವಿವರಿಸುವ ಪರಿಣಿತಿಯನ್ನು ಹೊಂದಿರಬೇಕು.

ವಿದ್ಯಾರ್ಥಿಗಳು ಆಯ್ಕೆಮಾಡಿಕೊಳ್ಳುವ ವಿಷಯವು ವಿದ್ಯಾರ್ಥಿಗಳ ಗ್ರಹಿಕೆಯ ಮಟ್ಟಕ್ಕೆ ನಿಲುಕುವಂತಿರಬೇಕು ಹಾಗೂ ವಾಸ್ತವಕ್ಕೆ ಅನ್ವಯಿಸುವಂತಹದ್ದಾಗಿರಬೇಕು.

**ಲಿಖಿತ ಪರೀಕ್ಷೆ :**

ಜಿಲ್ಲಾ ಮಟ್ಟದ ಸ್ಪರ್ಧೆಯ ದಿನದಂದು (23–6–2018) ಜರಗುವ ಲಿಖಿತ ಪರೀಕ್ಷೆಯು ವಸ್ತುನಿಷ್ಠ ಪ್ರಶ್ನೆಪತ್ರಿಕೆಗಳನ್ನೊಳಗೊಂಡಿದ್ದು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತದೆ. ಅದರ ವಿವರ ಹೀಗಿದೆ: ವಿಜ್ಞಾನಿಗಳ ಸಾಧನೆ – 8 ಪ್ರಶ್ನೆಗಳು, ಭೌತವಿಜ್ಞಾನ – 8 ಪ್ರಶ್ನೆಗಳು, ಗಣಿತ ವಿಜ್ಞಾನ – 8 ಪ್ರಶ್ನೆಗಳು, ಜೀವ ವಿಜ್ಞಾನ – 8 ಪ್ರಶ್ನೆಗಳು, ರಸಾಯನ ವಿಜ್ಞಾನ – 8 ಪ್ರಶ್ನೆಗಳು. ಒಟ್ಟು 40 ಪ್ರಶ್ನೆಗಳನ್ನು ಉತ್ತರಿಸಲು ನೀಡುವ ಕಾಲಾವಕಾಶ 40 ನಿಮಿಷಗಳು

**ಮೌಲ್ಯಮಾಪನದ ವಿವರ :**

| | |
|---|---|
| ಅರ್ಜಿ ಜೊತೆಗೆ ಸಲ್ಲಿಸಿದ ದಾಖಲೆಗಳಿಗಾಗಿ | ಗರಿಷ್ಠ 20 ಅಂಕಗಳು |
| ಲಿಖಿತ ಪರೀಕ್ಷೆ | ಗರಿಷ್ಠ 40 ಅಂಕಗಳು |
| ಯೋಜನೆಯ ಸಿದ್ಧತೆ ಮತ್ತು ಮಂಡನೆ | ಗರಿಷ್ಠ 40 ಅಂಕಗಳು |
| **ಒಟ್ಟು** | **100 ಅಂಕಗಳು** |

**ಪ್ರಶಸ್ತಿಗಳ ವಿವರ :**

ಆಯ್ಕೆಗೊಳ್ಳುವ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರದೊಂದಿಗೆ ಈ ಕೆಳಕಂಡಂತೆ ನಗದು ಬಹುಮಾನಗಳನ್ನು ನೀಡಲಾಗುವುದು.

| | | | |
|---|---|---|---|
| ಜಿಲ್ಲಾ ಮಟ್ಟ : | ಪ್ರಥಮ ಬಹುಮಾನ | ರೂ. | 5000/– |
| | ದ್ವಿತೀಯ ಬಹುಮಾನ | ರೂ. | 3000/– |
| | ತೃತೀಯ ಬಹುಮಾನ | ರೂ. | 2000/– |

ರಾಜ್ಯ ಮಟ್ಟದ ಸಮಾವೇಶದಲ್ಲಿ 4 ವಿದ್ಯಾರ್ಥಿಗಳನ್ನು ರಾಜ್ಯ ಯುವ ವಿಜ್ಞಾನಿಗಳಾಗಿ ಆಯ್ಕೆಮಾಡಿ 4 ವಿದ್ಯಾರ್ಥಿಗಳಿಗೂ ತಲಾ ರೂ. 10,000–00 ಗಳ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ವಿತರಿಸಲಾಗುವುದು.

**ಮಾರ್ಗಸೂಚಿ**

- ಅಭ್ಯರ್ಥಿಯು ಭರ್ತಿಮಾಡಿದ ಅರ್ಜಿಯನ್ನು ದೃಢೀಕರಿಸಿದ ಲಗತ್ತುಗಳೊಂದಿಗೆ ತಮ್ಮ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗೆ ಹಾಗು ಅರ್ಜಿಯ ಒಂದು ಪ್ರತಿಯನ್ನು ಕರಾವಿಪ ಕಚೇರಿಗೆ ದಿನಾಂಕ 14–6–2018 ರೊಳಗಾಗಿ ಸಲ್ಲಿಸಬೇಕು.
- ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ದಿನಾಂಕ 23, ಜೂನ್ 2018 ರಂದು ರಾಜ್ಯದ ಎಲ್ಲ 34 ಜಿಲ್ಲೆಗಳಲ್ಲಿ ಬೆಳಿಗ್ಗೆ 10–00 ಗಂಟೆಗೆ ಏಕಕಾಲದಲ್ಲಿ ಆಯಾ ಜಿಲ್ಲೆಯಲ್ಲಿ ಆಯೋಜಿಸಲಾಗುವುದು
- ಸ್ಪರ್ಧೆಯ ದಿನದಂದು ಅರ್ಜಿ ನಮೂನೆಯೊಂದಿಗೆ ಲಗತ್ತಿಸಿರುವ ಪ್ರಶಸ್ತಿ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ನಿರ್ಣಾಯಕರಿಗೆ ಸಲ್ಲಿಸಬೇಕು.
- ಯೋಜನೆ/ಮಾದರಿಯ ವರದಿ ಬರೆಯಲು ಎ4 ಸೈಜಿನ ಹಾಳೆಯ ಒಂದು ಬದಿಯಲ್ಲಿ ಮಾತ್ರ ಬರೆಯಬೇಕು. ವರದಿಯ ಎರಡು ಜೆರಾಕ್ಸ್ ಪ್ರತಿಯನ್ನು ಜಿಲ್ಲಾ ಮಟ್ಟದ ಸ್ಪರ್ಧೆಯ ದಿನದಂದು (23–6–2018) ಸಲ್ಲಿಸುವುದು.
- ವಿದ್ಯಾರ್ಥಿಗಳು ನೀಡುವ ಯೋಜನೆ/ಮಾದರಿಯ ವರದಿಯಲ್ಲಿ ಭಾವಚಿತ್ರ, ಸ್ವವಿವರ, ಶೀರ್ಷಿಕೆ, ಸಾರಾಂಶ, ಮಾಹಿತಿ ವಿಶ್ಲೇಷಣೆ, ಕೈಗೊಂಡ ಚಟುವಟಿಕೆಗಳು, ತೀರ್ಮಾನಗಳು, ಪರಿಹಾರ ಹಾಗೂ ತಮ್ಮ ಯೋಜನೆಯಿಂದ ಸಮಾಜಕ್ಕಾಗುವ ಉಪಯೋಗಗಳನ್ನು ಒಳಗೊಂಡಿರಬೇಕು.
- ವಿದ್ಯಾರ್ಥಿಯು ತನ್ನ ಯೋಜನೆಯನ್ನು ಮಂಡಿಸುವ ಸಮಯದಲ್ಲಿ ಗರಿಷ್ಠ 4 ಚಾರ್ಟ್/ಗ್ರಾಫ್‌ಗಳನ್ನು ಮತ್ತು ಯಂತ್ರೋಪಕರಣಗಳನ್ನು (ಎಲ್.ಸಿ.ಡಿ. ಪ್ರೊಜೆಕ್ಟರ್/ಓ.ಹೆಚ್.ಪಿ) ಬಳಸಬಹುದು.
- ಕರ್ನಾಟಕ ರಾಜ್ಯದ ಯಾವುದೇ ಪಠ್ಯಕ್ರಮದ ಶಾಲಾ/ಕಾಲೇಜಿನಲ್ಲಿ ಪ್ರಸ್ತುತ 9 ರಿಂದ 12ನೇ ವರ್ಗದಲ್ಲಿ ಓದುತ್ತಿರುವ ವಿದ್ಯಾರ್ಥಿಯು ಸ್ಪರ್ಧೆಯಲ್ಲಿ ಭಾಗವಹಿಸಬಹುದು.
- ಈಗಾಗಲೇ ರಾಜ್ಯಮಟ್ಟದಲ್ಲಿ ಒಮ್ಮೆ ಯುವವಿಜ್ಞಾನಿಯಾಗಿ ಪ್ರಶಸ್ತಿ ಪಡೆದ ಅಭ್ಯರ್ಥಿಗಳಿಗೆ ಮತ್ತೆ ಇನ್ನೊಂದು ಬಾರಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

**ಹೆಚ್ಚಿನ ಮಾಹಿತಿಗಾಗಿ**

**ಕರಾವಿಪ ಕಚೇರಿ ದೂರವಾಣಿ: 080–26718939 ಮೊ. 9483549159 ಇವರನ್ನು ಸಂಪರ್ಕಿಸುವುದು**